Journal of Advances in Developmental Research (IJAIDR)
E-ISSN: 0976-4844 ● Website: www.ijaidr.com ● Email: editor@ijaidr.com

ವರ್ತಮಾನದ ಸಂಘರ್ಷಗಳು : ದೇವಾಲಯ ಪ್ರವೇಶ ಮತ್ತು ಮಹಿಳೆ

ಡಾ.ಮುಮ್ತಾಜ್ ಬೇಗಂ

ಸಹ ಪ್ರಾಧ್ಯಾಪಕರು ಮತ್ತು ಸಂಯೋಜಕರು, ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ
ಎಸ್.ಕೆ.ಎನ್.ಜಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗಂಗಾವತಿ, ಜಿ:ಕೊಪ್ಪಳ

"ಯತ್ರ ನಾರೇಷು ಪೂಜ್ಯತೆ ತತ್ರ ರಮಂತೆ ದೇವತಾಃ"– ಎಂದ ನೆಲದಲ್ಲಿ ಹೆಣ್ಣಿಗೆ ಆಗುತ್ತಿರುವ ತಾರತಮ್ಯಗಳ ಬಗೆಗೆ ಚಿಂತನೆಗೆ ಒಳಮಾಡಬೇಕಾದ ಅವಶ್ಯಕತೆ ಇದೆ. ಅಲ್ಲದೇ ಅದು ವರ್ತಮಾನದ ಜರೂರಿ ಕೂಡ ಹೌದು. ಹೆಣ್ಣನ್ನು ಗೌರವದ ಸ್ಥಾನದಲ್ಲಿ ಕಂಡ ಸಂಸ್ಕೃತಿ ಎಂದು ವೈಭವದ ವರ್ಣನೆಗಳಿಂದ ಹೆಣ್ಣಿನ ಬದುಕು ಬದಲಾಗಿಲ್ಲ. ಹೆಣ್ಣು ಎನ್ನುವ ಕಾರಣಕ್ಕೆ ಪಶುಗಳಿಗಿಂತ ಕಡಿಮೆಯಾಗಿ ಕಂಡ ಸಮಾಜಗಳು ನಮ್ಮ ಮಧ್ಯೆ ಇವೆ. ಹೆಣ್ಣನ್ನು ವಸ್ತುವನ್ನಾಗಿ, ಆಸ್ತಿಯನ್ನಾಗಿ ಭಾವಿಸುವ ಪುರುಷ ಪ್ರಧಾನ ನೆಲೆಗಳನ್ನು ವ್ಯವಸ್ಥಿತವಾಗಿ ಗಟ್ಟಿಗೊಳಿಸಿಕೊಳ್ಳುತ್ತಾ ಬಂದ ಸಮಾಜದಲ್ಲಿ ಹೆಣ್ಣನ್ನು ಎರಡನೆ ದರ್ಜೆಯ ಪ್ರಜೆಯಾಗಿ ಕಾಣಲಾಗಿದೆ. ಹೆಣ್ಣಿನ ಬಗೆಗಿನ ನಿರ್ವಚನಗಳು ಆಕೆಗೆ ಒಂದು ಸ್ವತಂತ್ರ ಅಸ್ಥಿತ್ವವನ್ನು ಕೊಡದೆ ತಂದೆ, ಗಂಡ, ಮಗನ ಮೂಲಕವಾಗಿ ಗುರುತಿಸಿಕೊಳ್ಳುವಂತೆ ಮಾಡಲಾಗಿದೆ. ಹೆಣ್ಣಿಗಾಗಿಯ ನಿರ್ಮಿತವಾಗಿರುವ ನೀತಿ ನಿಯಮಗಳು, ನಿಷೇದ, ಮೌಲ್ಯ ಪರಿಪಾಲನೆ, ಕರ್ತವ್ಯ ಹೀಗೆ ಪುರುಷಶಾಹಿತ್ವದ ನಡವಳಿಕೆಯ ಮಾದರಿಗಳನ್ನು ಪ್ರಯೋಗಿಸುವುದರ ಮೂಲಕ ಮಹಿಳೆಯನ್ನು ಹಿಡಿತದಲ್ಲಿಟ್ಟುಕೊಳ್ಳುವಲ್ಲಿ ಬಹುದೊಡ್ಡ ಪುರುಷ ರಾಜಕಾರಣವಿದೆ.

ಲಿಂಗ ತಾರತಮ್ಯ ಮತ್ತು ಮಹಿಳೆ : ಹೆಣ್ಣು ಗಂಡು ಎಂಬ ಜೈವಿಕ ಲಕ್ಷಣಗಳು ಲಿಂಗ ಎಂಬುದಾಗಿ ಹುಟ್ಟಿನಿಂದಲೇ ನಿರ್ಧಾರಿತವಾಗುತ್ತದೆ. ಲಿಂಗ ಸೃಷ್ಟಿ ಪ್ರಕೃತಿದತ್ತವಾದ ಸಹಜ ಸ್ಥಿತಿ, ದೇಹ ರಚನೆ, ಸಂತಾನೋತ್ಪತ್ತಿ ಕ್ರಿಯೆಯಲ್ಲಿ ಹೆಣ್ಣು ಗಂಡು ಎರಡು ಲಿಂಗಗಳು ಮಹತ್ವದ್ದೆ ಆಗಿದೆ. ಗಂಡು ಹೆಣ್ಣಿನ ಕ್ರೋಮೋಜೋಮುಗಳ ಕಾರಣದಿಂದ ಜೈವಿಕವಾಗಿ ಬಂದಿರುವ ಲಿಂಗವು ಮಾನವ ಸಂತತಿಯ ನಿರಂತರತೆಗೆ ಕಾರಣವಾಗುವಂತಹುದು. ಹೆಣ್ಣು ಗಂಡು ಎನ್ನುವ ಭೇದದ ನೀತಿ ಹುಟ್ಟಿನಿಂದ ಬಂದುದ್ದಲ್ಲ. ಅದೊಂದು ಸಾಮಾಜಿಕ ಸಂಸ್ಕೃತಿಯ ಆಚರಣೆಯ ಭಾಗವಾಗಿ ಬಂದಿರುವಂತಹುದು.

ತಾಯಿಯ ಗರ್ಭದಲ್ಲಿ ರೂಪಗೊಳ್ಳುವ ಜೈವಿಕ ಲಿಂಗವನ್ನು ಆಧುನಿಕ ಅವಿಷ್ಕಾರಗಳ ಮೂಲಕ ಕಂಡು ಹಿಡಿಯುವ ಯಂತ್ರಗಳಿವೆ. ಅವುಗಳ ಮೂಲಕ ಹೆಣ್ಣು ಭ್ರೂಣವನ್ನು ಹತ್ಯೆ ಮಾಡುವ ಪ್ರಯತ್ನಗಳು ನಿತ್ಯವು ನಡೆದಿವೆ. ಲಿಂಗ ಅಸಮಾನತೆಯ ಆಚರಣೆ ಇಂದು ನಿನ್ನೆಯದ್ದಲ್ಲ. ಪರಂಪರಾನುಗತವಾಗಿ ಹೆಣ್ಣು ಗಂಡು ಎನ್ನುವ ಭೇದಭಾವ ಮೌಲ್ಯದ ಹೆಸರಿನಲ್ಲಿ ಆಚರಣೆಗೆ ತರಲಾಗಿದೆ. ಲಿಂಗ ತಾರತಮ್ಯಕ್ಕೆ ಸಾಂಸ್ಕೃತಿಕ ಹಿಮ್ಮುಖ ಇರುವುದರಿಂದ ಆ ಆಚರಣೆ ಪದ್ಧತಿಗಳನ್ನು ಸಾರಾಸಗಟವಾಗಿ ಕಿತ್ತೆಸೆಯಲು ಆಗುವುದಿಲ್ಲ. ಕಾಲ ಬದಲಾದಂತೆ ಅಲ್ಪ ಸ್ವಲ್ಪ ಬದಲಾವಣೆ ಕಂಡರೂ ಅಸಮಾನತೆಯ ತಾರತಮ್ಯ ಉಳಿದುಕೊಂಡು ಬಂದಿದೆ. ಲಿಂಗತ್ವದ ಪಾತ್ರಗಳು ವಿವಿಧ ಹಂತಗಳಲ್ಲಿ ಪಡಿಯಚ್ಚು ಪಾತ್ರಗಳಾಗಿ ಮುಂದುವರೆದುಕೊಂಡು ಬಂದಿವೆ.

ಧರ್ಮ ಮತ್ತು ಮಹಿಳೆ : ಭಾರತೀಯರು ತಮ್ಮ ಧಾರ್ಮಿಕ ನಂಬಿಕೆಗಳು, ಜಾತಿ, ಲಿಂಗತಾರತಮ್ಯ ಬದಿಗೊತ್ತಿ ನಿಂತರೆ ಕಳೆದ 60 ವರ್ಷಗಳಲ್ಲಿ ತಲುಪಿರುವ ಆರ್ಥಿಕ ಸಾಧನೆಗೆ ಎರಡು ಪಟ್ಟನ್ನು 30 ವರ್ಷಗಳ ಒಳಗೆಯೇ ತಲುಪಬಹುದು ಎಂದು ಸೈನ್ಸ್ ಅಡ್ವನ್ಸ್ ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿರುವ ಖಜಾಯಿಸಿಹ ಖುಚಿಬಿರಜ ಕಿರಿಜಾಜಜಜ ಜಾಠಿಠಿಟಿಟಿ ಖುಚಿಬಿರಜ ಟಿಟಿ ಣಜ 20ಣ ಥಿಜಾಣಣಿಠಿಥಿ ಅಧ್ಯಾಯನದ ವರದಿ ಈ ಮಾತನ್ನು ಉಲ್ಲೇಖಿಸಿದೆ. ಭಾರತದ ಸಮಾಜ ಮತ್ತು ಆರ್ಥಿಕತೆಯಲ್ಲಿ ಧರ್ಮ ಇಂದಿಗೂ ಕೂಡ ಪ್ರಮುಖ ಪಾತ್ರವನ್ನು ವಹಿಸುತ್ತದೆ. ವರ್ಲ್ಡ್ ವ್ಯಾಲ್ಯೂಸ್ ಸರ್ವೇಯ ವರದಿ ಪ್ರಕಾರ ಶೇ 90 ರಷ್ಟು ಭಾರತೀಯರು ಧರ್ಮ ಎನ್ನುವುದನ್ನು ಅತಿ ಮುಖ್ಯವಾದ ಅಂಶವೆಂದು ಪರಿಭಾವಿಸುತ್ತಾರೆ ಎನ್ನುವ ವರದಿಯನ್ನು ನೀಡುತ್ತದೆ. ಸಮೀಕ್ಷೆಯ ಪ್ರಕಾರ ಧಾರ್ಮಿಕತೆಯತ್ತ ಒಲವು ಹೆಚ್ಚಾಗುತ್ತಿರುವುದು ಭಾರತ ಮತ್ತು ಕಿರ್ಗಿಸ್ತಾನ್ ದೇಶಗಳಲ್ಲಿ ಮಾತ್ರ ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಈ ದೇಶಗಳಲ್ಲಿನ ಶೇ.10ಕ್ಕೂ ಹೆಚ್ಚು ಧರ್ಮಕ್ಕೆ ಅತಿಯಾದ ಪ್ರಾಶಸ್ತ್ಯ ನೀಡಿರುತ್ತಾರೆ. ಈ ಮುಂಚೆ ಭಾರತದಲ್ಲಿ ಶೇ.79.2ರಷ್ಟು ಮಂದಿ ಧರ್ಮವನ್ನು ತಮ್ಮ ಜೀವನದ ಅವಿಭಾಜ್ಯ ಅಂಗವೆಂದು ಪರಿಗಣಿಸಿದ್ದರು. 2014ರ ಮೇಳೆಗೆ ಈ ಪ್ರಮಾಣ ಶೇ.91.3ರಷ್ಟು ಏರಿಕೆಯಾಗಿದೆ. ಧಾರ್ಮಿಕತೆ ಕೇವಲ ಧರ್ಮಕ್ಕೆ ಮಾತ್ರ ಸೀಮಿತವಲ್ಲ ಅದರೊಳಗಿನ ಆವರಣದಲ್ಲಿ ಮಹಿಳೆಯ ಸ್ವಾತಂತ್ರ್ಯ ಕೂಡ ಒಳಗೊಂಡಿದೆ.

ಧರ್ಮಗಳು, ಮೌಲ್ಯಗಳು, ನಂಬಿಕೆಗಳ ಹಿನ್ನಲೆಯಲ್ಲಿ ಹೆಣ್ಣು ಗಂಡಿನ ಮಧ್ಯೆದ ಅಂತರವನ್ನು ಸೃಷ್ಟಿಗೊಳಿಸಿರುವುದು ಕಂಡು ಬರುತ್ತದೆ. ಹೆಣ್ಣಿನ ಜೈವಿಕತೆಯನ್ನು ಅಸಹ್ಯ, ಅಪವಿತ್ರ, ಅಶುದ್ಧ ಎನ್ನುವ ನಂಬಿಕೆಯೊಂದಿಗೆ ಹೆಣ್ಣನ್ನು ನಿಷೇದಕ್ಕೆ ಒಳಪಡಿಸಿರುವುದು ಕಂಡು ಬರುತ್ತದೆ. ಅಲ್ಲದೇ ಪುರುಷ ಕೇಂದ್ರಿತ ಸಾಮಾಜಿಕ ಮೌಲ್ಯಗಳು ಸ್ತ್ರೀಯನ್ನು ಪರಾಧಿನತೆಯ ದುರ್ಬಲ ನೆಲೆಯಲ್ಲೇ ಕಾಣ ಬಯಸುತ್ತದೆ. ಹೆಣ್ಣಿನ ಜೈವಿಕ ದೌರ್ಬಲ್ಯ ಒಂದು ಸಾಂಸ್ಕೃತಿಕ ಪೂರ್ವಾಗ್ರಹದ ಪ್ರತೀಕವೇ ಹೊರತು ಹೆಣ್ಣಿನ ದೌರ್ಬಲ್ಯವಲ್ಲವೆನ್ನುವುದನ್ನು ಸಮಾಜ ಅರ್ಥೈಯಿಸಿ ಕೊಳ್ಳಬೇಕಾದ ಜರೂರಿ ಇದೆ. ಧರ್ಮ ಮತ್ತು ಧರ್ಮ ಗ್ರಂಥಗಳನ್ನು ಪುನರ್ ಅವಲೋಕಿಸುವ ಅಗತ್ಯವಿದೆ. ಪುನರ್ ಮೌಲೀಕರಣಕ್ಕೆ ಒಳಪಡಿಸಿದಾಗ ನಂಬಿಕೆ, ಸಂಪ್ರದಾಯ ಆಚರಣೆಗಳ ಒಳರಾಜಕಾರಣ ಅರ್ಥವಾಗಲು ಸಾಧ್ಯವಾಗುವುದು. ವರ್ತಮಾನದಲ್ಲೂ ಹೆಣ್ಣು ಮತ್ತು ಹೆಣ್ಣಿನ ದೇಹದ ಬಗೆಗೆ ಹುಟ್ಟಿಕೊಂಡಿರುವ ನಂಬಿಕೆಗಳು, ಆಚರಣೆ ಪದ್ಧತಿಗಳು ಧರ್ಮಕೇಂದ್ರೀತವಾದವುಗಳು. ಆದರೆ ಧರ್ಮದಿಂದಲೇ ಹುಟ್ಟಿದಂತಹುಗಳಲ್ಲ ಎನ್ನುವ ಸೂಕ್ಷ್ಮಗ್ರಹಿಕೆ ಇಲ್ಲಿ ಅಗತ್ಯವಾಗಿ ಬೇಕು

ಮಹಿಳೆ ಮತ್ತು ದೇವಾಲಯ ಪ್ರವೇಶ ನಿಷೇದ : ದೇವಾಲಯಗಳು ಎಂದರೆ ದೇವರು ವಾಸವಾಗಿರುವ ಸ್ಥಳ. ದೇವರಿಗೆ ಮನುಷ್ಯರಲ್ಲಿ ಭೇದವಿಲ್ಲ. ಅದಕ್ಕಾಗಿಯೇ ನಮ್ಮ ಜನಪದರು ಹುಟ್ಟಿಸಿದ ದೇವರು ಹುಲ್ಲು ಮೇಯಿಸುವನೇ ಎಂಬ ಗಾದೆಮಾತಗಳು ಪ್ರಚಲಿತದಲ್ಲಿರುವುದನ್ನು ಕಾಣುತ್ತೇವೆ. ದೇವಾಲಯಕ್ಕೆ ಹೋಗುವ ಮುಖ್ಯ ಉದೇಶ ಮನಸ್ಸಿನ ನೆಮ್ಮದಿಯನ್ನು ಪಡೆಯಲು. ಬದುಕಿನ ಜಂಜಡಗಳಿಂದ ಕೆಲ ಸಮಯವಾದರೂ ದೇವರ ಸಾನಿಧ್ಯದಲ್ಲಿ ಕುಳಿತು ಬದುಕಿನ ಏರುಪೇರುಗಳನ್ನು ಎದುರಿಸುವ ಶಕ್ತಿಯನ್ನು ನೀಡು ಎಂದು ಬೇಡಿಕೊಳ್ಳುವ ಪವಿತ್ರ ಸ್ಥಳವಾಗಿದೆ ಎಂದು ದೇವಾಲಯದ ಪರಿಕಲ್ಪನೆಯನ್ನು ಪಾಠಶಾಲೆಗಳಲ್ಲಿ ಕಲಿಸುತ್ತಾ ಬಂದ ಪಾಠವೂ ಹೌದು. ಪರಂಪರಾನುಗತವಾಗಿ ಬಂದ ಪದ್ಧತಿಯೂ ಹೌದು.

ಮಹಿಳೆ ಮತು ಆಧುನಿಕತೆಯ ಸವಾಲುಗಳು

ಭಾರತೀಯರನ್ನೊಳಗೊಂಡು ಪ್ರಪಂಚದಾದ್ಯಂತ ಸಂಪ್ರದಾಯವಾದಿ ಸಮಾಜಗಳು ಧರ್ಮ, ಪರಂಪರೆ ಚರಿತ್ರೆಯನ್ನು ಪರಿಭಾವಿಸುವ ಕ್ರಮ, ಕಾಲದಿಂದ ಕಾಲಕ್ಕೆ ಭಿನ್ನ ಸ್ಥಿತ್ಯಂತರವನ್ನು ಹೊಂದುತ್ತಲೇ ಇರುತ್ತದೆ. ಪರಂಪರೆ, ಸಂಸ್ಕೃತಿ ಆಚಾರ ವಿಚಾರ ಚರಿತ್ರೆ ಧರ್ಮ ರಾಷ್ಟ್ರೀಯತೆ ಸರ್ವಕಾಲಕ್ಕೂ ಅಬಾಧಿತವಾಗಿಯೂ ಮತ್ತು ಮೂಲರೂಪದಲ್ಲಿ ಉಳಿಯಬೇಕೆಂಬ ತಲ್ಲಣ ರೂಪದ ಹಪಹಪಿ ಹಾಗೆ ಉಳಿದು ಕೊಂಡು ಬಂದಿದೆ. ಈ ಕಾರಣಕ್ಕಾಗಿ ಸಮಾಜ ನಿತ್ಯ ಬದುಕಿನ ಆಗುಹೋಗುಗಳನ್ನು ನಿಯಂತ್ರಕ ಶಕ್ತಿಗಳಾಗಿ ಚರಿತ್ರೆಯನ್ನು ರೂಪಿಸಲ್ಪಡುತ್ತಿರುತ್ತದೆ. ವರ್ತಮಾನದಲ್ಲಿ ಈ ಬಗೆಯ ಅಭಾದಿತಗಳಿಗೆಲ್ಲ ಪುರಾಣ ಪರಂಪರೆ ಮತ್ತು ಚರಿತ್ರೆಯ ಆವರಣದೊಳಗೆ ಹುಡುಕಲು ಪ್ರಯತ್ನಿಸುತ್ತದೆ.

ಪರಂಪರೆ, ಚರಿತ್ರೆ, ಸಂಸ್ಕೃತಿ ಇವು ಅಮೂರ್ತ ರೂಪಗಳಿಗೆ ವರ್ತಮಾನವನ್ನು ರೂಪಿಸುವ ಶಕ್ತಿ ಇದೆಯೇ? ಎನ್ನುವ ಪ್ರಶ್ನೆ ಎದುರಾದಾಗ ಉತ್ತರವಾಗಿ ನಮ್ಮ ಚರಿತ್ರೆಯಲ್ಲಿ ನಡೆದ ಘಟನೆಗಳನ್ನೊಮ್ಮೆ ಅವಲೋಕಿಸಿದರೆ ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ. ಮಧ್ಯಕಾಲೀನ ಯುರೋಪಿನಲ್ಲಿ ಊಳಿಗಮಾನ್ಯ ಪದ್ಧತಿ ಮೂಲಭೂತವಾದ ಮತ್ತು ಅದು ಹುಟ್ಟು ಹಾಕಿದ್ದ ದುರಾಡಳಿತ ಕೊನೆಗೊಂಡಿತು. ಹಳೆಯ ಪರಂಪರೆ ಮತ್ತು ಧಾರ್ಮಿಕ ನಂಬಿಕೆಗಳಿಗಾಗಿ ಮಧ್ಯಕಾಲೀನ ಸಮಾಜಗಳು ತಮ್ಮ ಬದುಕಿನ ಕನಸನ್ನು ನನಸಾಗಿಸಿಕೊಂಡರು. ಫ್ರಾನ್ಸ್, ರಷ್ಯಾ, ಚೀನಾ, ವಿಯಟ್ನಾಮ್ ಭಾರತ ಕ್ಯೂಬಾಗಳು ಮರುಹುಟ್ಟು ಪಡೆದದ್ದು ಸಂಪ್ರದಾಯವಾದದಿಂದಲ್ಲ ಬದುಕುವ ಸ್ವಾತಂತ್ರದ ಹಂಬಲದಿಂದ ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ.

ಮಹಿಳೆ ದೇವಾಲಯ ಪ್ರವೇಶ ಮತ್ತು ವರ್ತಮಾನದ ಸಂಘರ್ಷ

ದೇವರು ಧರ್ಮದ ಬಗೆಗೆ ಅಪಾರವಾದ ನಂಬಿಕೆಯನ್ನು ಹೊಂದಿರುವ ಸಂಸ್ಕೃತಿಯಲ್ಲಿ ಮಹಿಳೆಯನ್ನು ಕಾಣುವ ಬಗೆಯಲ್ಲಿ ಮಲತಾಯಿ ಧೋರಣೆಯನ್ನು ಹೊಂದಿರುವುದು ಕಂಡು ಬರುತ್ತದೆ. ಒಂದೆಡೆ ಪೂಜ್ಯನೀಯ ಸ್ಥಾನವನ್ನು ಶಾಸ್ತ್ರಗಳಲ್ಲಿ ಕೊಡುವ ಮೂಲಕ ಮಹಿಳೆಯನ್ನು ಗೌರವದಿಂದ ಕಾಣುವ ಬಗೆ ಮೇಲ್ನೋಟಕ್ಕೆ ಕಂಡರು, ಆಂತರ್ಯದಲ್ಲಿ ಮಹಿಳೆಯ ಸ್ವಾತಂತ್ರ್ಯವನ್ನು ಪುರುಷ ರಾಜಕಾರಣದ ಹಿನ್ನೆಲೆಯಲ್ಲಿ ಹತ್ತಿಕ್ಕೂವ ಎಲ್ಲ ಪ್ರಯತ್ನಗಳು ನಡೆದಿವೆ.

ಹನ್ನರಡನೆಯ ಶತಮಾನದಲ್ಲೇ ಸ್ತ್ರೀ ಸಮಾನತೆಗಾಗಿ ಪ್ರಾರಂಭವಾದ ಚಳುವಳಿಗೆ ಇನ್ನೂ ಸರಿಯಾದ ಫಲಶೃತಿಗಳು ದೊರತಿಲ್ಲವೆಂದರೆ ಕಾಲ ಕಾಲಕ್ಕೆ ಈ ಪುರುಷ ರಾಜಕಾರಣ ಹೇಗೆಲ್ಲ ಮಹಿಳೆಯ ಮೇಲೆ ಅಮೂರ್ತ ಒತ್ತಡಗಳನ್ನು, ಪರಿಧಿಗಳನ್ನು ಹಾಕುತ್ತಾ ಆಕೆಗೆ ಸ್ವತಂತ್ರ ಅಸ್ತಿತ್ವವೇ ಇಲ್ಲದಂತೆ ರೂಢಿ ಪದ್ಧತಿ ನಿಷೇಧಗಳ ಹೆಸರಿನಲ್ಲಿ ಆಕೆಯನ್ನು ವ್ಯವಸ್ಥಿತವಾಗಿ ಬಂಧಿಸಿರುವುದು ಇತಿಹಾಸ.

ಇಪ್ಪತ್ತೊಂದನೆಯ ಶತಮಾನ ಬಂದರೂ ಬದಲಾಗದ ಮಹಿಳೆಯ ಬಗೆಗಿನ ಅಭಿಪ್ರಾಯಗಳು, ಜೀವದಾಯಿತ್ವದ ಹೆಣ್ಣಿನ ಸಂಗೋಪನಾ ಶಕ್ತಿಯು ಜಾಗತಿಕರಣದ ಸಂಪಾದನಾ ಶಕ್ತಿಯ ಪ್ರಾಬಲ್ಯದಲ್ಲಿ ಅಲಕ್ಷಕ್ಕೆ ಒಳಗಾಗುತ್ತಿದೆ. ಇಂದು ಸಮಾಜದಲ್ಲಿ ವಿವಿಧ

ಕ್ಷೇತ್ರಗಳಲ್ಲಿ ಹೆಣ್ಣಿನ ಪಾಲುದಾರಿಕೆಯಿದೆ ಆದರೆ ಹೆಣ್ಣಿನ ಸಂವೇದನೆಯ ಚಹರೆ ಕಾಣುವುದಿಲ್ಲ. ದಿನನಿತ್ಯದ ಸಾಮಾಜಿಕ, ರಾಜಕೀಯ, ಧಾರ್ಮಿಕ ಘಟನೆಗಳಿಗೆ ಹೆಣ್ಣು ಮಕ್ಕಳೂ ಪ್ರತಿಕ್ರಿಯಿಸುವ ವಿಧಾನದಲ್ಲಿ ಸ್ವಪ್ರಜ್ಞೆಯ ನೆಳಕು ಕಾಣುತ್ತಿಲ್ಲ. ಮಹಿಳೆಯ ಬಗೆಗಿನ ತಾರತಮ್ಯ ತಾರಕಕ್ಕೆರಿದ ಇಂದಿನ ದಿನದಲ್ಲಿ ಕುಟುಂಬ ತನ್ನ ಹೊಣೆ ಎಂದು ಭಾವಿಸಿ ಹೆಣಗಾಡುತ್ತಿದ್ದಾಳೆ. ಕುಟುಂಬಗಳಲ್ಲಿ ಸಾಮಾಜೀಕರಣವು ಲಿಂಗ ತಾರತಮ್ಯದಿಂದ ಕೂಡಿದೆ. ಲಿಂಗತಾರತಮ್ಯವೆಂದರೆ ಮಹಿಳೆಗೆ ಸಂಬಂಧಿಸಿದ್ದು ಎಂದು ಭಾವಿಸುವುದು ಮತ್ತು ಅದು ಖಾಸಗೀತನಕ್ಕೆ ಒಳವಾಡುವುದು ಅದನ್ನು ಶಾಸನಬದ್ಧತೆಯಿಂದ ಸರಿಪಡಿಸಲು ಸಾಧ್ಯವಿಲ್ಲ ಎಂಬ ಭಾವನೆ ವ್ಯಾಪಕವಾಗಿದೆ. ಮಹಿಳೆಯರು ಅನುಭವಿಸುತ್ತಿರುವ ದೌರ್ಜನ್ಯ, ಹಿಂಸೆ, ಮಾನಭಂಗ, ಪ್ರತ್ಯೇಕೀಕರಣ, ಶೋಷಣೆಗಳ ಹಿಂದೆ ಲಿಂಗತಾರತಮ್ಯದ ಪಾತ್ರವಿದೆ. ಮಹಿಳೆಯರ ಕಾರ್ಯಕ್ಷೇತ್ರವೆನಿದ್ದರೂ ಕುಟುಂಬಕ್ಕೆ ಮಾತ್ರ ಸೀಮಿತವೆಂದು ಭಾವಿಸಲಾಗಿದೆ. ಜ್ಞಾನಶಿಸ್ತುಗಳು ಮತ್ತು ಸರ್ಕಾರಗಳು ಮಹಿಳೆಯ ದುಡಿಮೆಯನ್ನು ರಾಷ್ಟ್ರೀಯ ಆರ್ಥಿಕತೆಗೆ ಸೇರಿಸಲು ಸಾಧ್ಯವಾಗಿಲ್ಲ. ಇದರಿಂದ ಲಿಂಗತಾರತಮ್ಯ ಆಳವಾಗಿ ಬೇರೂರಿಬಿಟ್ಟಿದೆ ಮಹಿಳೆಗೆ ಅನುಭವಿಸುವುದನ್ನು ಬಿಟ್ಟರೆ ಬೇರೆ ದಾರಿಯಿಲ್ಲ ಎನ್ನುವಂತೆ ಮಾನಸಿಕತೆಯಲ್ಲಿ ಗಟ್ಟಿಯಾಗಿ ಉಳಿದು ಬಿಟ್ಟಿದೆ.

ಗಂಡು ಮಗುವಿನ ವ್ಯಾಮೋಹವನ್ನು ಹೆಣ್ಣಿಗೆ ಬೆಳೆಸಿರುವುದು ಇದೆ ಪುರುಷ ಸಮಾಜ. ಮಾಸಿಕ ಋತುಚಕ್ರವನ್ನು ಸೂತಕ, ಮೈಲಿಗೆ ಅನ್ನುವುದನ್ನು ಮಹಿಳೆಯರಲ್ಲಿ ಮೂಡುವಂತೆ ಮಾಡಿದ್ದು ಈ ಸಮಾಜವೇ ಹೊರತು ಮಹಿಳೆಯಲ್ಲ. ಆದರೆ ಸಮಾಜದ ನಂಬಿಕೆಗಳನ್ನು ಮಹಿಳೆ ನಂಬಿದ್ದಾಳೆ. ಈ ಹಿನ್ನಲೆಯಲ್ಲಿ ಲಿಂಗ ತಾರತಮ್ಯ, ಸಂಪ್ರದಾಯ, ಕಂದಾಚಾರದ ಹೆಸರಿನಲ್ಲಿ ಸಮರ್ಥಿಸಿಕೊಳ್ಳುವ ಕೆಲಸವು ದಿನನಿತ್ಯ ನಡೆಯುತ್ತಲೇ ಇವೆ. ಅಸಮಾನತೆಯನ್ನು ಪರಿಶುದ್ಧತೆ, ಮಡಿ ಮೈಲಿಗೆ, ಸೂತಕ ಹೆಸರಿನಲ್ಲಿ ನಿರಂತರ ಪೋಷಿಸಿಕೊಂಡು ಬರಲಾಗುತ್ತಿದೆ. ಧಾರ್ಮಿಕತೆಯಲ್ಲಿ ಮುಟ್ಟು ಮೈಲಿಗೆ ಹೆಸರಿನಲ್ಲಿ ಮಹಿಳೆಯ ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಪ್ರಯತ್ನ ಅನಾದಿಕಾಲದಿಂದಲೂ ನಡೆದುಕೊಂಡು ಬಂದಿರುವ ರೂಢಿಯಾಗಿ ಅದನ್ನು ಒಪ್ಪಿತ ಸಮಾಜದ ಭಾಗವೆನ್ನುವಂತೆ ಪರಿಭಾವಿಸಲಾಗಿದೆ. ಇತ್ತೀಚೆಗೆ ಚರ್ಚೆಗೆ ಒಳಗಾಗುವಂತೆ ಮಾಡಿದ ದೇವಾಲಯಗಳ ಪ್ರವೇಶದ ಸುಪ್ರೀಂ ಕೋರ್ಟ್ ತೀಪು ಐತಿಹಾಸಿಕ ತೀರ್ಪನ್ನು ನೀಡುವ ಮೂಲಕ ಸಂವಿಧಾನದ ಆಶಯಗಳಿಗೆ ಬಲ ತುಂಬಿದಂತಾಗಿದೆ.

"ಮಹಿಳೆಯರ ಋತುಚಕ್ರಕ್ಕೆ ಒಳಗಾಗಿರುವ ಸಂಗತಿಯ ಆಧಾರದ ಮೇಲೆ ದೇವಾಲಯಕ್ಕೆ ಪ್ರವೇಶ ನಿರಾಕರಿಸಲಾಗುತ್ತಿದೆ. ಹಿಂದೂ ಧರ್ಮದಲ್ಲಿ ಹಿಂದೂ ಪುರುಷ, ಹಿಂದೂ ಮಹಿಳೆ ಎಂಬ ಪ್ರತ್ಯೇಕೀಕರಣ ಇಲ್ಲದೇ ಇರುವಾಗ ಮಹಿಳೆಯರಿಗೆ ದೇವಾಲಯ ಪ್ರವೇಶ ನಿಷೇದವು ಸಮಾನತೆ ಹಕ್ಕಿನ ಉಲ್ಲಂಘನೆ" ಎಂದು ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿಗಳಾದ ದೀಪಕ್ ಮಿಶ್ರಾ, ವಿ. ಗೋಪಾಲಗೌಡ ಮತ್ತು ಕುರಿಯನ್ ಜೋಸೆಫ್ ಅವರ ಪೀಠ ಅಭಿಪ್ರಾಯಪಟ್ಟಿದೆ.

ಸೌದಿ ಅರೇಬಿಯಾದ ಮೆಕ್ಕಾ ಧಾರ್ಮಿಕ ಕೇಂದ್ರದ ನಂತರ ನಿರ್ದಿಷ್ಟ ಕಾಲದಲ್ಲಿ ತೀರ್ಥಯಾತ್ರೆ ಮಾಡುವ ಪ್ರಪಂಚದಲ್ಲಿ ಎರಡನೆ ಅತಿದೊಡ್ಡ ಧಾರ್ಮಿಕ ಕೇಂದ್ರವೆಂದು ಜನಪ್ರಿಯತೆಯನ್ನು ಪಡೆದಿರುವ ದೇವಾಲಯವೆಂಬ ಹೆಗ್ಗಳಿಕೆಗೆ ಶಬರಿಮಲೆಯ ಅಯ್ಯಪ್ಪ ಸ್ವಾಮಿ ದೇವಸ್ಥಾನ ಪಡೆದಿದೆ. ಒಂದು ಅಂದಾಜಿನ ಪ್ರಕಾರ ಪ್ರತಿ ವರ್ಷ ಸುಮಾರು ನಾಲ್ಕು ಕೋಟಿ ಯಾತ್ರಿಕರು ಮಕರ ಸಂಕ್ರಾತಿ ಸಂದರ್ಭದಲ್ಲಿ ಶಬರಿಮಲೆಗೆ ಭೇಟಿ ನೀಡುತ್ತಾರೆ. ಇದರಿಂದ ಸುಮಾರು ೩೦೦ ಕೋಟಿಯಷ್ಟು ಆದಾಯ ಬರುತ್ತದೆ ಎಂದು ಅಂದಾಜಿಸಲಾಗಿದೆ. ಇದು ಒಂದೆಡೆಯಾದರೆ ಈ ದೇವಸ್ಥಾನಕ್ಕೆ 10 ರಿಂದ 50 ವರ್ಷದ ಮಹಿಳೆಯರ ಪ್ರವೇಶವನ್ನು ನಿರಾಕರಿಸಲಾಗಿದೆ. ಕಾರಣ ಅಯ್ಯಪ್ಪ ಸ್ವಾಮಿ ಬ್ರಹ್ಮಚಾರಿಯಾಗಿರುವುದರಿಂದ ಮಹಿಳೆಯರ ಮಡಿ ಮೈಲಿಗೆಯ ಕಾರಣಕ್ಕೆ ಮಹಿಳೆ ದೇವಾಲಯ ಪ್ರವೇಶಿಸಿದರೆ ಅಶುದ್ಧವಾಗುತ್ತದೆ ಎಂದು ದೇವಸ್ಥಾನದ ಆಡಳಿತ ಮಂಡಳಿ ನೂರಾರು ವರ್ಷಗಳಿಂದ ಪಾಲಿಸಿಕೊಂಡು ಬರುತ್ತಿದೆ. ಮುಟ್ಟಿಲ್ಲದೇ ಮನುಷ್ಯ ಹುಟ್ಟಲಾದರೂ ಹೇಗೆ ಸಾಧ್ಯ ಎನ್ನುವ ಪ್ರಜ್ಞೆ ಬೇಕಾಗಿದೆ. ಮುಟ್ಟನ್ನು ಕೆಟ್ಟದೆಂದು ಭಾವಿಸುವ ಪುರುಷ ಶಾಹಿತ್ವ ಮಹಿಳೆಯನ್ನು ಮುಟ್ಟುವುದಾದರೂ ಯಾತಕ್ಕೆ? ಹೆಣ್ಣು ಇಲ್ಲದ ಬದುಕನ್ನು ಸಾಗಿಸಲು ಸಾಧ್ಯವಿಲ್ಲದ ಮಾತು. ಮನುಷ್ಯ ಸಂತತಿಯ ನಿತಂತರತೆಗೆ ಹೆಣ್ಣು ಗಂಡು ಇಬ್ಬರು ಬೇಕೆಂಬ ಪ್ರಜ್ಞೆಯ ನೆಲೆಯಲ್ಲಿ ನಮ್ಮ ಚಿಂತನೆಗಳು ಸಾಗಬೇಕಾದ ಅಗತ್ಯವಿದೆ.

ಮುಟ್ಟಿನಲಿ ಹುಟ್ಟಿದ ನೀನು, ಮುಟ್ಟನ್ನು ಮೆಟ್ಟಿ ನಿಂತರೆ, ಮತ್ತೆ ಹುಟ್ಟೆಲ್ಲಿ ನಿನಗೆ, ಗರ್ಭವಿಲ್ಲದೇ ಹುಟ್ಟು,ಪಡೆದ ಮಕ್ಕಳಿಹರೇ ಜಗದಲಿ ...(ಅಯ್ಯೋ ಅಪ್ಪಾ..) ಎಂದು ಕವಿ ಇಡೀ ಜೀವ ಸಂಕುಲವನ್ನು ಪ್ರಶ್ನಿಸಿದ್ದಾರೆ. ಬಹುಶಃ ಯಾರಿಂದಲೂ ಉತ್ತರಿಸಲಾಗದ ಕಾಡುವ ಪ್ರಶ್ನೆ ಇದು. ಮಹಿಳೆಯರ ಪ್ರವೇಶ ನಿಷೇದ ಹೇರುವ ಮೂಲಕ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸಿದಂತಾಗುತ್ತದೆ ಎಂದು ಪ್ರಗತಿಪರರು ಪ್ರಶ್ನಿಸುತ್ತಿದ್ದಾರೆ.

ಮಹಿಳೆ ದೇವಾಲಯ ಪ್ರವೇಶ ನಿಷೇದ ಮತ್ತು ವಾಸ್ತವ ಸಂಗತಿ

ಶಬರಿಮಲೈ ದೇವಸ್ಥಾನ ಪ್ರವೇಶ ಕುರಿತು ಕಾನೂನು ಹೋರಾಟಕ್ಕೆ ಸುದೀರ್ಘ ಇತಿಹಾಸವಿದೆ. ಈ ಕುರಿತು ಕೇರಳ ಸರ್ಕಾರದ ನಿಲುವು ಕಾಲಕಾಲಕ್ಕೆ ಬದಲಾಗುತ್ತಾ ಬಂದಿದೆ. ಮಹಿಳೆಯರಿಗೆ ಮುಟ್ಟಿನ ಕಾರಣಕ್ಕೆ ಪ್ರವೇಶ ನಿಷೇದದ ಹಿನ್ನಲೆಗೆ

ಪುರಾಣಗಳ ಹಿನ್ನಲೆಯನ್ನು ಕೊಡುತ್ತಾರೆ. ಆದರೆ ವಾಸ್ತವದಲ್ಲಿ ನಡೆಯುತ್ತಿರುವ ರಾಜಕೀಯ ಮತ್ತು ಸಾಮಾಜಿಕ ಬದುಕಿನ ಮೇಲೆ ಅನೇಕ ಪರಿಣಾಮಗಳನ್ನು ಬೀರಿದೆ.

ಋತುಮತಿಯಾಗುವ ಮಹಿಳೆಯರಿಗೆ ಪ್ರವೇಶ ನಿಷೇದವನ್ನು ತಳ್ಳಹಾಕಿ ಸುಪ್ರೀಂ ಕೋರ್ಟ್ ಮಹಿಳೆಯರ ಪ್ರವೇಶಕ್ಕೆ ಅವಕಾಶ ಕಲ್ಪಿಸಿತು. ಹೀಗಿದ್ದರೂ ಸುಪ್ರೀಂ ಕೋರ್ಟ್ ಆದೇಶವನ್ನು ಮೀರಿ ಬೆಟ್ಟದಲ್ಲಿರುವ ದೇವಾಲಯ ಪ್ರವೇಶಕ್ಕೆ ಅನೇಕೆ ರಾಜಕೀಯ ಪಕ್ಷಗಳು, ಅನೇಕ ಸಂಘಟನೆಗಳು ತಡೆ ಒಡ್ಡಿದ್ದವು. ಮಹಿಳಾ ಪ್ರವೇಶವನ್ನು ಮಹಿಳೆಯರೆ ವಿರೋಧಿಸಿದ ಘಟನೆಗಳು ಜರೂಗಿದವು. ಸರಣಿ ಪ್ರತಿಭಟನೆ, ರಥಯಾತ್ರೆಗಳು, ಸಮಾವೇಶಗಳು ಸೇರಿದಂತೆ ಮಹಿಳೆಯ ಪರ ವಿರೋಧ ಶಕ್ತಿ ಪ್ರದರ್ಶನಗಳು ನಡೆದವು. ವನಿತಾ ಮಥಿಲ್ ಹೆಸರಿನಲ್ಲಿ 620 ಕಿಲೋಮಿಟರ್ ಉದ್ದ ಮಹಿಳಾ ಗೋಡೆ ನಿರ್ಮಿಸಿದ್ದರು. ಇದಾದ ನಂತರ ಬಿಂದು ಮತ್ತು ಕನಕದುರ್ಗ ಎಂಬ ಇಬ್ಬರು ಮಹಿಳೆಯರು ದೇವಸ್ಥಾನವನ್ನು ಪ್ರವೇಶಿಸಿ ಬಂದಿದ್ದಾರೆ. ನಂತರ ಆ ಮಹಿಳೆಯರ ಮನೆಯ ಮುಂದೆ ಬಿಗಿಭದ್ರತೆಯನ್ನು ಮಾಡಲಾಗಿತ್ತು. ಇದೆಲ್ಲವು ವಾಸ್ತವದಲ್ಲಿ ನಡೆದ ಘಟನೆಗಳು.

ಮಹಿಳಾ ಪ್ರವೇಶ ನಿಷೇದಿಸಿದ ದೇವಾಲಯಗಳು

ಸುಪ್ರಿಂ ಕೋರ್ಟ್ ಶಬರಿಮಲೆ ದೇವಸ್ಥಾನಕ್ಕೆ ಎಲ್ಲ ದೇವಾಲಯಗಳಿಗೆ ಎಲ್ಲಾ ವಯೋಮಾನದ ಮಹಿಳೆಯರಿಗೆ ಅವಕಾಶ ನೀಡಿದ್ದರು. ಮಹಿಳೆಯರಿಗೆ ಪ್ರವೇಶ ನಿರಾಕರಿಸಿದ ದೇವಾಲಯ ಇದೊಂದೆ ಅಲ್ಲ. ಭಾರತದ ಅನೇಕ ರಾಜ್ಯಗಳಲ್ಲಿ ವಿವಿಧ ದೇವಾಲಯಗಳಿಗೆ ಮಹಿಳಾ ಪ್ರವೇಶವನ್ನು ನಿರಾಕರಿಸಿದ ದೇವಸ್ಥಾನಗಳಿವೆ.

- **ಕಾರ್ತಿಕೇಯ ದೇವಾಲಯ:** ರಾಜಸ್ಥಾನದ ಪುಷ್ಕರ ಜಿಲ್ಲೆಯ ಕಾರ್ತಿಕೇಯ ದೇವಸ್ಥಾನಕ್ಕೆ ಪ್ರವೇಶವಿಲ್ಲ. ಕಾರ್ತಿಕೇಯ ಬ್ರಹ್ಮಚಾರಿಯಾಗಿದ್ದ ಕಾರಣ ದೇವಾಲಯದಲ್ಲಿ ಪ್ರವೇಶವಿಲ್ಲ.
- **ಪಟಬೌಸಿ ಸತ್ರಾ:** ಅಸ್ಸಾಂ ಬರ್ಪೇಟಾ ಜಿಲ್ಲೆಯಲ್ಲಿರುವ ಪಟಬೌಸಿ ಸತ್ರಾ ದೇವಾಲಯಕ್ಕೆ ಮಹಿಳೆಯರಿಗೆ ಪ್ರವೇಶವಿಲ್ಲ. ಕಾರಣ ಮಹಿಳೆ ಋತುಮತಿ ಮತ್ತು ಪಾವಿತ್ರ್ಯತೆಯ ಕಾರಣ ನೀಡಲಾಗುತ್ತಿದೆ.
- **ರಿಶಿ ಧ್ರೂಮ್ ಆಶ್ರಮ ಮತ್ತು ದೇವಾಲಯ :** ಉತ್ತರ ಪ್ರದೇಶದ ಹರ್ಮಿಪುರ ಜಿಲ್ಲೆಯ ಮುಸ್ಕಾರಾ ಖುರ್ದ್ ಪ್ರದೇಶದಲ್ಲಿರುವ ರಿಶಿ ಧ್ರೂಮ್ ದೇವಾಲಯದಲ್ಲಿ ಮಹಿಳೆಗೆ ಪ್ರವೇಶ ನಿಷಿದ್ಧ. ಕಾರಣ ಮಹಿಳಾ ಪ್ರವೇಶದಿಂದ ದೇವರು ಕೋಪಗ್ರನಾಗಿ ಊರಿನ ಪರಿಸ್ಥಿತಿ ಹದಗೆಡುತ್ತದೆ ಎಂಬುದು ಇಲ್ಲಿನ ಭಕ್ತರ ನಂಬಿಕೆಯಾಗಿದೆ.
- **ರಣಕಪುರ ಜೈನ ದೇವಾಲಯ :** ರಾಜಸ್ಥಾನದ ಪಾಲಿ ಜಿಲ್ಲೆಯಲ್ಲಿರುವ ದೇವಾಲಯ ಪ್ರವೇಶ ನಿಷೇದಕ್ಕೆ ಋತುಮತಿಯಾಗುವ ಕಾರಣಕ್ಕೆ ಪ್ರವೇಶ ನಿಷೇದಿಸಲಾಗಿದೆ.
- **ಶ್ರೀ ಪದ್ಮನಾಭಸ್ವಾಮಿ ದೇವಾಲಯ :** ಕೇರಳದ ತಿರುವನಂತಪುರದಲ್ಲಿರುವ ನೂರಾರು ವರ್ಷಗಳ ಪುರಾತನವಾದ ದೇವಾಲಯ ಇಲ್ಲಿ ದೇವಾಲಯದ ಆವರಣದಲ್ಲಿ ನಿಂತು ಪ್ರಾರ್ಥನೆ ಸಲ್ಲಿಸಬಹುದು ದೇವಾಲಯ ಒಳಗೆ ಪ್ರವೇಶವಿಲ್ಲ.
- **ನಿಜಾಮುದ್ದೀನ್ ದರ್ಗಾ :** ದೆಹಲಿಯಲ್ಲಿರುವ ನಿಜಾಮುದ್ದೀನ ದರ್ಗಾ 14ನೇ ಶತಮಾನದ ಸೂಫಿ ಸಂತರ ಸಮಾಧಿ ಸ್ಥಳವಾಗಿದ್ದು ಅಲ್ಲಿಯೂ ಮಹಿಳಾ ಪ್ರವೇಶಕ್ಕೆ ಅವಕಾಶವಿಲ್ಲ.
- **ಖಾಜಾ ಬಂದೇನವಾಜ ದರ್ಗಾ :** ಕರ್ನಾಟಕದ ಕಲಬುರ್ಗಿಯಲ್ಲಿರುವ ಈ ದರ್ಗಾ ಸೂಫಿ ಖಾಜಾ ಬಂದೇನವಾಜರ ಸಮಾಧಿ ಸ್ಥಳವಾಗಿದ್ದು ಹೊರಗೆ ನಿಂತು ಮಹಿಳೆಯರು ಪ್ರಾರ್ಥಿಸಬೇಕು ಒಳಗೆ ಹೋಗುವಂತಿಲ್ಲ. ಇಲ್ಲಿಯೂ ಅದೇ ಋತುಮತಿಯಾಗುತ್ತಾರೆಂಬ ಕಾರಣ. ಕೇವಲ ಹಿಂದೂ ದೇವಾಲಯಗಳು ಮಾತ್ರವಲ್ಲ ಇತರೆ ಧರ್ಮದ ಪ್ರಾರ್ಥನಾ ಕೇಂದ್ರಗಳಲ್ಲಿ ಮಹಿಳೆಗೆ ಪ್ರವೇಶ ನಿಷೇದ ಹೇರಲಾಗಿದೆ.
- **ಭವಾನಿ ದೀಕ್ಷಾ ಮಂಟಪಂ :** ತೆಲಗಾಂಣದ ವಿಜಯವಾಡದಲ್ಲಿನ ದುರ್ಗಾಮಾತೆಯ ದೇವಾಲಯದಲ್ಲೂ ನಿಷೇದ ಹೇರಲಾಗಿದೆ. ಮುಖ್ಯ ಅರ್ಚಕರ ನಿಧನದ ನಂತರ ಅವರ ಪುತ್ರಿಯನ್ನು ಮುಖ್ಯ ಅರ್ಚಕರನ್ನಾಗಿ ನೇಮಕ ಮಾಡಲಾಗಿದೆಯಾದರೂ ಅವರು ದೇವಾಲಯದ ಗರ್ಭಗುಡಿಗೆ ಪ್ರವೇಶಿಸುವಂತಿಲ್ಲ.

ಧರ್ಮಾಧಾರಿತ ಧೃವಿಕರಣದ ತಂತ್ರವಾಗಿ ಭಾವುಕತೆ ಹಾಗೂ ಲೌಕಿಕ ಬಲೆಯೊಳಗೆ ಮಹಿಳೆಯರು ವ್ಯವಸ್ಥಿತವಾಗಿ ಬಂಧಿಸಲಾಗುತ್ತಿದೆ. ಮಹಿಳೆಯನ್ನು ಮೊದಲು ಮಾನವ ಜೀವಿಯಂತೆ ಪರಿಗಣಿಸಿ, ಹೆಣ್ಣನ್ನು ದೈವತ್ವದ ಸ್ವರೂಪದಲ್ಲಿ ಕಾಣುತ್ತಿರೆಂದರೆ ಆಕೆ ದೇವರು ಇರುವಲ್ಲಿಗೆ ಹೋಗುವುದನ್ನು ಯಾಕೆ ನಿರಾಕರಿಸುತ್ತಿರೆಂಬ ಪ್ರಶ್ನೆಯನ್ನು ಕವಯತ್ರಿ ಹೀಗೆ ಪ್ರಶ್ನಿಸಿದ್ದಾರೆ. ಪೂಜಿಸಲು ಹೆಣ್ಣು ದೇವತೆ, ದೇವ ಇರುವಲ್ಲಿಗೆ ಆಕೆ ಹೋಗಬಾರದೇಕೆ?, ನಿನ್ನ ನೋಡಲು ನೂರೆಂಟು, ಬಂಟರ ಕಾವಲು... ಜೀವಪರತೆಗೆ, ಇಲ್ಲವೇ ನ್ಯಾಯ.. (ಅಯ್ಯೋ ಅಪ್ಪಾ)

ಇಲ್ಲಿ ದೇವಾಲಯ ಪ್ರವೇಶದಿಂದ ಏನನ್ನೋ ಪಡೆಯುತ್ತೆವೆ ಎನ್ನುವ ಭ್ರಮೆಯಲ್ಲ. ಧಾರ್ಮಿಕತೆಯಲ್ಲಿ ನಂಬಿಕೆ ಇದ್ದವರು ನಿಯಮಗಳನ್ನು ಪಾಲಿಸಲಿ ಇಲ್ಲದಿರುವವರು ಆ ದೇವಸ್ಥಾನವನ್ನು ಒಂದು ಸ್ಮಾರಕವೆಂದು ನೋಡುವುದಾದರೆ ನೋಡಲಿ ಇಲ್ಲಿ ಪ್ರಶ್ನೆ ಎದ್ದಿರುವುದು ಮಾತ್ರ ಮಹಿಳಾ ಪ್ರವೇಶ ನಿರಾಕರಿಸಿದ್ದರ ಹಿನ್ನೆಲೆನಲ್ಲಿ ಇದು ಸಂವಿಧಾನ ಬದ್ದವಾದ ಹಕ್ಕುಗಳಿಗೆ ವಿರೋಧವಾದದ್ದು ಎಂದು. ಆದ್ದರಿಂದ ಭಾರತೀಯರಾದ ನಾವುಗಳು ಸಂವಿಧಾನವನ್ನು ಗೌರವಿಸುತ್ತೇವೆ ಎಂದರೆ ಸಂವಿಧಾನದ ನಿಯಮಗಳನ್ನು ಪಾಲಿಸಿದಾಗ ಅದರ ಇರುವಿಗೆ ಗೌರವಿಸಿದಂತೆ.

ಆಕರಗ್ರಂಥ

1. ನಾಡದೇವಿ ಭುವನೇಶ್ವರಿ ನಡೆದು ಬಂದ ದಾರಿ ಒಂದು ಸಾಂಸ್ಕೃತಿಕ ಅಧ್ಯಯನ, ಲೇ: ಡಾ.ಟಿ.ಆರ್. ಅನಂತರಾಮು, ಅಂಕಿತ ಪ್ರಕಾಶನ ಬೆಂಗಳೂರು
2. ದೇವಾಲಯಗಳ ನಾಡಿನಲ್ಲಿ ತಮಿಳುನಾಡು ರಾಜ್ಯ ಪ್ರವಾಸ ಕಥನ, ಲೇ: ಡಾ.ಶೈಲಜಾ ಎನ್, ಬಾಗೇವಾಡಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು
3. ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿ, ಲೇ: ಡಾ. ಎಸ್.ನಂಜುಂಡಸ್ವಾಮಿ, ಹೇಮಂತ ಸಾಹಿತ್ಯ ಪ್ರಕಾಶನ ಬೆಂಗಳೂರು.